# ಪರಮೇಶ್ವರಿಯ ಪುಣ್ಯನಾಮವನು
(ರಾಗ: ಧನ್ಯಾಸಿ)

ಪರಮೇಶ್ವರಿಯ ಪುಣ್ಯನಾಮವನು ಪಗಲಿರುಳು
ಸರಸಾನುರಾಗದಿಂದೋದಿಕೇಳಿದವರ್ಗೆ
ದುರಿತಕಂಟಕವಳಿದು ಕೈಸಾರುತಿಹವಮಳತರ-ಭೋಗಮೋಕ್ಷಂಗಳು ॥ಪ॥

ಹ್ರೀಂಕಾರಿ ವಾಣಿ ಕಲ್ಯಾಣಿ ರುದ್ರಾಣಿ ರಮೆ
ಓಂಕಾರರೂಪಿಣಿ ಗಣಾನಿ ಗಾನಪ್ರೀತೆ
ಹ್ರೈಂಕಿಲಾಮಾಲಿನಿ ಮಹಾಮಾಯಿ ಮಾತಂಗಿ ಕ್ಲೀಂಕಲೇ ವರ-ವರೇಣ್ಯೆ।
ಸೌಂಕಾರ-ಸದನೆ ಶರ್ವಾಣಿ ಶಾರದೆ ಸತ್ಯೆ
ಕ್ರೌಂ-ಕವಚ-ಮುಖ್ಯೆ ಮಂತ್ರಾಧಿದೇವತೆ ದೇವಿ
ಶ್ರೀಂಕಿಲಾಕಾರೆ ವಿದ್ಯಾಂಗಿ ಮಾತೃಕೆ ಮಾನ್ಯೆ ಶಾಂಕರೀಶಾನಿಯೆಂದು ॥೧॥

ಗಿರಿಜೆ ಗೀರ್ವಾಣ-ಪೂಜಿತೆ ಗೌರಿ ಗುಹ-ಜನನಿ
ಪರನಾದಬಿಂದುಮಂದಿರೆ ಮನೋಂಬುಜಹಂಸೆ
ವರದೆ ವೈಭವೆ ನಿತ್ಯಮುಕ್ತೆ ನಿರ್ಮಲೆ ನಿರಾವರಣೆ ಶಿವೆ ಶಾಂತೆ ಕಾಂತೆ।
ಧರಣೆ ಧರ್ಮಾನುಗತೆ ಸಾವಿತ್ರಿ ಗಾಯತ್ರಿ
ವಿರಜೆ ವಿಶ್ವಾತ್ಮಕೆ ವಿಧೂತ-ಪಾಪವ್ರಾತೆ
ಶರಣಹಿತೆ ಸರ್ವಮಂಗಳೆ ಸಚ್ಚಿದಾನಂದೆ ಪರ-ಸುಧಾಕಾರಿಯೆಂದು ॥೨॥

ಚಂಡೆ ಚಂಡೇಶ್ವರಿ ಚರುತೆ ಕಾಳಿ ಕೌಮಾರಿ
ಕುಂಡಲೆ ಕುಟಿಲೆ ಬಾಲೆ ಭೈರವಿ ಭವಾನಿ ಚಾ
ಮುಂಡಿ ಮೂಲಾಧಾರೆ ಮನುವಂಧ್ಯೆ ಮುನಿಪೂಜ್ಯೆ ಪಿಂಡಾಂಡಮಯೆ ಚಂಡಿಕೆ।
ಮಂಡಲ-ತ್ರಯ-ನಿಲಯೆ ದಂಡಿ-ಜಯೆ ದುರ್ಗಿ ಫಣಿ
ಕುಂಡಲೆ ಮಹೇಶ್ವರಿ ಮನೋನ್ಮನಿ ಜಗನ್ಮಾತೆ
ಖಂಡ-ಶಶಿ-ಮಂಡನೆ ಮೃಡಾಣಿ ಪಾರ್ವತಿ ಪರಮ-ಚಂಡಕರ-ಮೂರ್ತಿಯೆಂದು ॥೩॥

ವಿಮಲೆ ವಿಖ್ಯಾತೆ ಮಧುಮತಿ-ಮುಖ್ಯೆ ಮಹನೀಯೆ
ಸುಮತಿ ಸುಲಲಿತೆ ಹೈಮವತಿ ಭಾವೆ ಭೋಗಾರ್ಥಿ
ಕಮಲೆ ಕಾತ್ಯಾಯಿನಿ ಕರಾಳೆ ತ್ರಿಪುರವಿಜಯೆ ದಮೆ ದಯಾ-ರಸಪೂರಿತೆ।
ಅಮೃತೆ ಅಂಬಿಕೆ ಅನ್ನಪೂರ್ಣೆ ಅಶ್ವಾರೂತೆ
ಶಮೆ ಶುದ್ಧೆ ಸಿಂಹವಾಹಿನಿ ಶುಭ-ಕಲಾಪೆ ಸು
ಪ್ರಮದೆ ಪಾವನೆ ಪದ್ಯೆ ಪಾಶದೆ ಪರಬ್ರಹ್ಮೆ ಉಮೆ ಸಹಜ ಸುಮುಖಿಯೆಂದು ॥೪॥

ಇಂತು ಗುರು–ಶಂಭು–ಲಿಂಗದ ಶಕ್ತಿಸೌಭಾಗ್ಯ
ಸಂತತ–ಶರೀರ–ಸಮ್ಯಗ್–ಜ್ಞಾನ–ಸತ್ಕ್ರಿಯೆ ಸ
ಮಂತು ಕರುಣಾಸನಾಭರಣಾಯುಧಾದಿ ಸುಗುಣಾಂತರಾದಿಗಳಾಗುತ
ಸಂತಸವನೀವ ಶಾಂಭವಿಯ ನೂರೆಂಟು ಶುಭ
ವಾಂತ ನಾಮಂಗಳನು ಜಪಿಸಿಯೊಡೆ ಸತಿಪುತ್ರ
ಸಂತಾನ–ಸಕಲ–ಸಂಪದ–ಸಿದ್ಧಿಯಪ್ಪುದೋರಂತೆ ನಿಶ್ಚಯಮಿದೆಂದು ॥೫॥

– ನಿಜಗುಣ ಶಿವಯೋಗಿ, ಕೈವಲ್ಯ ಪದ್ಧತಿ, ಪದ್ಯ ೬

== ==